*A.*— Sri VEERENDRA PATIL (Minister for Public Works).—

(*a*) No.

(*b*) to (*e*) Does not arise in view of reply to (*a*).

Sri G. CHANDRAKANTH.—May I know whether any survey work has been done ?

† Sri VEERENDRA PATIL.—There is a scheme which is under investigation. It is going to be a medium-size irrigation project costing about Rs. 95 lakhs. It is only an approximate cost, and it will be difficult to say what will be the exact cost of the project.

Sri DIGAMBARA RAO B. KALMANKAR.—When this investigation was started and how much more time that it require ?

Sri VEERENDRA PATIL.—I cannot say at present on what date it was started. According to the Information before me, the investigation is still going on and it may take some more time.

Sri G. CHANDRAKANTH.—What is the estimated cost of this project ?

Sri VEERENDRA PATIL—I said that investigation is not yet complete. It is difficult to say at this stage the estimated cost of the project.

## Utilisation of Cauvery water allotted to State

143. Sri C. K. RAJAIAH SHETTY (Chikkanayakanahalli).—

Will the Minister for Public Works be pleased to state :—

(*a*) the quantum of water allotted to Mysore State in Cauvery Basin as per 1924 agreement between Madras and Mysore State and the life time of the agreement ;

(*b*) the programme of Mysore Government to utilise the allotted water with the name of Schemes and their capacity ;

(*c*) whether it is a fact that new area of Cauvery Basin has come to Mysore State after reorganisation, that is Coorg District and Kollegal Taluk of Mysore State ;

(*d*) if so the action taken by the Government for allotment of proportionate increased quantum of water ?

*A.*—Sri VEERENDRA PATIL (Minister for Public Works).—

(*a*) The 1924 Agreement provdies for the manner of utilisation of the waters subject to certain terms and conditions contained therein.

(*b*) (1) K. R. Sagar with a capacity of 44.827 T.M.C.ft. has already been constructed.

(SRI VEERENDRA PATIL)

(2) Against the additional storage of 45 T.M.Cft. the following Schemes have been proposed.

(i) Hemavathy Project with a live capacity of 21·7 T.M.Cft. is under construction.

(ii) Kambadakada (Cauvery Project) Project with an effective capacity of 5 T.M.Cft. is under examination.

(3) (i) As an offset against the Bhavani Reservoir in Madras, Kabini Project with a live capacity of 19.2 T.M.Cft. is under construction.

(ii) As an offset against Amaravathi Reservoir in Madras. Suvarnavathi Project with a live storage of 1·1 T.M.Cft, is under construction.

(*c*) Yes.

(*d*) A Committee constituted to examine these facts has submitted its report which is being examined.

**Sri C. K. RAJAIAH SHETTY.**—May I know when the term of the agreement will expire ?

† **VEERENDRA PATIL.**—The term of the agreement is for 50 years. It has commenced from 1924 and it is going to expire in 1974.

**Sri C. K. RAJAIAH SHETTY.**—In answer to (b) it is stated that Hemavathy project with a live capacity of 21.7 T.M.Cft. is under construction. Does it incinde both first and second stages ?

**Sri VEERENDRA PATIL.**—This is a general question about agreement. It is better the Hon'ble member puts a separate question with regard to the projects that have been taken up.

**Sri C. K. RAJAIAH SHETTY.**—My question about Hemavathy project is whether it includes both first and second stages ?

**Sri VEERENDRA PATIL.**—When the project is taken up and constructed it is designed for the ultimate stage.

ಶ್ರೀ ಎಚ್. ಡಿ. ದೇವೇಗೌಡ.—ಈ ವಿಷಯವನ್ನು ಪರಿಶೀಲಿಸುವುದಕ್ಕಾಗಿ ನೇಮಕವಾಗಿದ್ದ ಸಮಿತಿಯವರು ಕೊಟ್ಟಿರತಕ್ಕ ವರದಿ ಸರ್ಕಾರದವರ ಪರಿಶೀಲನೆಯಲ್ಲಿದೆ ಎಂದು ಹೇಳಲಾಗಿದೆ. ಆ ವರದಿಯ ವಿವರಗಳೇನು ? ಮತ್ತು ಆ ವರದಿಯಲ್ಲಿ ನಮ್ಮ ಈ ನದಿಯ ನೀರಿನಲ್ಲಿರತಕ್ಕ ಪಾಲನ್ನು 1974ನೇ ಇಸವಿಯ ನಂತರವೊ ಪಡೆಯುವ ಹಕ್ಕು ನಮಗಿದೆಯೇ ಎಂಬುದರ ಬಗ್ಗೆ ಅವರೇನು ತಿಳಿಸಿದ್ದಾರೆಂಬುದನ್ನು ಹೇಳುತ್ತೀರಾ ? ಅದನ್ನು ಸ್ಪಷ್ಟಪಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕಮಿಟಿಯವರು ವರದಿಮಾಡಿದ್ದಾರೆ. ಅದು ಅನೇಕ ವಾಲ್ಯೂಂ ಗಳಲ್ಲಿ ಬಂದಿದೆ. ಆ ರೀತಿಯಾಗಿ ದೊಡ್ಡ ರಿಪೋರ್ಟ್ ಬಂದಿರುವುದರಿಂದ ಅದನ್ನು ಸಂಪೂರ್ಣವಾಗಿ ಪರಿಶೀಲನೆಮಾಡುತ್ತಿದ್ದೇವೆ. ಇನ್ನೂ ಪೂರ್ತಿ ಮುಗಿಸಿಲ್ಲ ಕಮಿಟಿಯನ್ನು ನೇಮಕಮಾಡಿದಂಥ ಉದ್ದೇಶ 1974 ರಲ್ಲಿ ಇದು ತೀರ್ಮಾನವಾಗಬೇಕೆಂದು ಕರಾರು ಆಗಿದೆ. ಅದು ಪುರ್ನಪರಿಶೀಲನೆಗೆ ಬರುತ್ತದೆ. ಆಗ ಫೈಷ್ ಅಗ್ರಿಮೆಂಟ್ ಮಾಡುವುದಕ್ಕಾಗುತ್ತದೆ. ಆಗ ನಮ್ಮ ನಿಲುಮೆ ಇದರ ಬಗ್ಗೆ ಏನಿರಬೇಕು, ಯಾವರೀತಿಯಲ್ಲಿ ನಮ್ಮ ಹಕ್ಕುಬಾಧ್ಯತೆಗಳನ್ನು ಪ್ರೊಟೆಕ್ಟ್ ಮಾಡುವ ಸಲುವಾಗಿ ಪ್ರಯತ್ನಗಳನ್ನು ಮಾಡಬೇಕು ಎಂಬ ಬಗ್ಗೆ ಕಮಿಟಿಯವರು ಬೇಕಾದಷ್ಟು ಸವಿಸ್ತಾರವಾಗಿ ಮಾಹಿತಿ

ಗಳನ್ನು ಕೊಟ್ಟಿದ್ದಾರೆ. ಅವರ ಶಿಫಾರ್ಸುಗಳನ್ನೂ ಸಹ ಕೊಟ್ಟಿದ್ದಾರೆ. ನಾನೇ ಇನ್ನೂ ವರದಿಯನ್ನು ನೋಡಿಲ್ಲ. ಆ ವರದಿ ಇನ್ನೂ ತಜ್ಞರ ಪರಿಶೀಲನೆಯಲ್ಲಿಯೇ ಇರುತ್ತದೆ. ಅದರ ಬಗ್ಗೆ ಈಗ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ರಾಜ್ಯಗಳ ಪುನರ್ವಿಂಗಡಣೆಯ ಕಾಲದಲ್ಲಿ ಯಾವ ಒಂದು ಆಧಾರದ ಮೇಲೆ ಮೈಸೂರಿಗೆ ಕಾವೇರಿ ಬೇಸಿನ್‌ನಿಂದ ಹೊಸದಾಗಿ ಬಾಸ್ತಿ ಪ್ರದೇಶಗಳು ಸೇರುವ ಕಾರಣವಿತ್ತೋ, ಅದೇ ಒಂದು ಆಧಾರದ ಮೇಲೆ ಈಗ ಇರತಕ್ಕ ಕರಾರನ್ನು ರಿವೋಕ್ ಮಾಡಿ ನಮ್ಮ ಹಕ್ಕನ್ನು ಇನ್ನೂ ಹೆಚ್ಚಿಸಿಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ರಾಜ್ಯಗಳ ಪುನರ್ವಿಂಗಡಣೆಯಾದಮೇಲೆ ನಾನಾ ರೀತಿಯಲ್ಲಿ ನಮಗೆ 1924ರ ಅಗ್ರಿಮೆಂಟ್ ಪ್ರಕಾರ ಬಹಳಮಟ್ಟಿಗೆ ಅನಾನುಕೂಲವಾಗಿದೆ. ಅದರಿಂದ ಆ ಅಗ್ರಿಮೆಂಟ್ ರಿವೈಜ್‌ಮಾಡಬೇಕೆಂದು ಒತ್ತಾಯಪಡಿಸಿದ್ದೇವೆ. ಆದರೆ ಮದ್ರಾಸ್ ಸರ್ಕಾರದವರು ಅದಕ್ಕೆ ಒಪ್ಪಲಿಲ್ಲ. ಅದನ್ನು 1974ರ ಮೇಲೆಯೇ ವಿಚಾರ ಮಾಡಬೇಕಾಗಿದೆ, ಅದರಿಂದ ಈಗ ಅದನ್ನು ಒಪ್ಪುವುದಿಲ್ಲವೆಂದು ಹೇಳಿದಮೇಲೆ, ನಮಗೆ ಎರಡನೆಯ ಹಾದಿ ಬೇರೆ ಇರಲಿಲ್ಲ. ಅದ್ದರಿಂದ 1974ರಲ್ಲಿ ನಮ್ಮ ಹಕ್ಕುಬಾಧ್ಯತೆಗಳನ್ನು ಯಾವರೀತಿ ಉಳಿಸಿಕೊಳ್ಳಬೇಕು, ಅದರ ಬಗ್ಗೆ ನಮ್ಮ ನಿಲುಮೆ ಯಾವರೀತಿ ಇರಬೇಕೆಂಬುದನ್ನು ಕಮಿಟಿಯವರು ಇನ್ನೂ ವಿಚಾರಮಾಡುತ್ತಿದ್ದಾರೆ. ನಾವೂ ಸಹ ಅದರ ಬಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ಕಾವೇರಿ ಜಲಾಶಯದ ಹೊಸ ಪ್ರದೇಶಗಳು ನಮಗೆ ಸೇರಿದಮೇಲೆ 1924ರ ಅಗ್ರಿಮೆಂಟ್ ಪ್ರಕಾರ ನೀರಿನ ಪ್ರಮಾಣ ನಮಗೆ ಬರುವುದು ಎಷ್ಟಿತ್ತೋ ಅದಕ್ಕಿಂತ ಹೆಚ್ಚು ಈಗ ಎಷ್ಟು ನೀರನ್ನು ಕೊಟ್ಟಿದ್ದಾರೆ ಮತ್ತು ಎಷ್ಟು ಸ್ಕೋರೇಜ್ ಕೆಪಾಸಿಟಿಯನ್ನು ನೀವು ಒಪ್ಪಿಕೊಳ್ಳುವುದಕ್ಕೆ ಪ್ರಯತ್ನಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದುಕೊಳ್ಳಬೇಕು. ಎರಡು ಹೊಸ ಪ್ರದೇಶಗಳು ನಮ್ಮಲ್ಲಿ ಬಂದಿದ್ದರೂ ಕೊಳ್ಳೇಗಾಲದಲ್ಲಿ ಹರಿಯುವಂಥ ಗುಂಡ್ಲು ನದಿ, ಕೂರ್ಗಿನಲ್ಲಿ ಹರಿಯುವಂಥ ಹಾರಂಗಿ ನದಿ–ಇವು ಎರಡೂ ನಾನ್-ಪೆರ್ಯಾನಿಯಲ್ ರಿವರ್ಸ್‌ಆಗಿವೆ. ಇವೆರಡೂ ಈ ಅಗ್ರಿಮೆಂಟಿನಲ್ಲಿ ಬರಲಾರದಂಥ ನದಿಗಳಾಗಿವೆ. ಅವುಗಳ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಮಗೆ ಅಗ್ರಿಮೆಂಟ್ ಅಡ್ಡಿ ಬರುತ್ತದೆಯೇ ಎನ್ನುವ ಬಗ್ಗೆ ಇನ್ನೂ ವಿಚಾರಮಾಡಬೇಕಾಗಿದೆ.

ಶ್ರೀ ಎನ್. ಎ. ಚನ್ನೇಗೌಡ.—ಹಿಂದಿನ ಕರಾರಿನ ಪ್ರಕಾರ ಆ ನಾಲೆಗಳಲ್ಲಿರತಕ್ಕ ನೀರನ್ನು ಯಾರು ಉಪಯೋಗಿಸಬೇಕೆಂದು ಸರ್ಕಾರದ ಅಭಿಪ್ರಾಯ ?

ಶ್ರೀ ವೀರೇಂದ್ರ ಪಾಟೀಲ್.—ಕೆ. ಆರ್. ಎಸ್. ಕಮಿಟಿ ಎಂಬುದಾಗಿ ಇದೆ. ಅವರು ಅದನ್ನು ಉಪಯೋಗಿಸುತ್ತಾರೆ,

ಶ್ರೀ ಎಚ್. ಡಿ. ದೇವೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ (2)ರಲ್ಲಿ 45 ಟಿ. ಎಂ. ಸಿ. ಫೀಟ್ ಹೆಚ್ಚಿನ ನೀರನ್ನು ಶೇಖರಿಸಿ ಯೋಜನೆಗಳನ್ನು ಕೈಗೊಳ್ಳುವಾಗ, ಹೇಮಾವತಿ ಯೋಜನೆಗೆ 21.7 ಟಿ. ಎಂ. ಸಿ. ಫೀಟಿನಷ್ಟೂ ಕಂಬದಕಡ ಯೋಜನೆಗೆ 5 ಟಿ. ಎಂ. ಸಿ. ಫೀಟಿನಷ್ಟೂ, ಉಪಯೋಗಿಸುವ ಬಗ್ಗೆ ಸರ್ಕಾರದವರು ನಿರ್ಧಾರ ತೆಗೆದುಕೊಂಡಿದ್ದು ಆಯಿತು. ಉಳಿದ ನೀರನ್ನು ಉಪಯೋಗಿಸುವ ಬಗ್ಗೆ ಸರ್ಕಾರ ಏನು ನಿರ್ಧಾರ ಮಾಡಿದೆ ? ಯಾವ್ಯಾವ ನಿರ್ಣಯಗಳನ್ನು ಕೈಗೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಇವತ್ತು ಪ್ರಾರಂಭ ಮಾಡಿದ ಕೆಲಸಗಳ ಬಗ್ಗೆ ವಿವರವಾಗಿ ಹೇಳಿದ್ದೇನೆ ಇದರ ಬಗ್ಗೆ ಅನೇಕ ಯೋಜನೆಗಳ ವಿಚಾರವನ್ನೂ ಸಹ ಮಾಡಿದ್ದೇನೆ ಕಾವೇರಿ ಬೇಸಿನ್‌ನಲ್ಲಿ ಎಷ್ಟು ಯೋಜನೆಗಳನ್ನು ಇನ್‌ವೆಸ್ಟಿಗೇಟ್ ಮಾಡಿದ್ದೇವೆ, ಎಷ್ಟು ಯೋಜನೆಗಳನ್ನು ನಾವು ಇನ್ನೂ ತೆಗೆದುಕೊಳ್ಳಬಹುದೆಂಬುದಕ್ಕೆ ಬೇರೆ ಪ್ರಶ್ನೆಗಳನ್ನು ಕೇಳಿದರೆ ಆಗ ಉತ್ತರ ಹೇಳಬಹುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—1924ನೇ ಇಸವಿಯ ಅಗ್ರಿಮೆಂಟ್ ಪ್ರಕಾರ 1974ನೇ ಇಸವಿಯ ಹೊತ್ತಿಗೆ 50 ವರ್ಷಗಳಾಗುತ್ತದೆ. ಆದರೆ ಇದುವರೆಗೂ ಆ ನೀರನ್ನು ಇವರು ಉಪಯೋಗಿಸಿಕೊಂಡಿಲ್ಲ. ಅಂದಮೇಲೆ 1974ನೇ ಇಸವಿಯವರೆಗೂ ಪೂರ್ತಿಯಾಗಿ ಇವರು ಆ ನೀರನ್ನು ಉಪಯೋಗಿಸುವ ಹಾಗೆ ಇಲ್ಲ. ಏಕೆಂದರೆ ಮದ್ರಾಸಿನಲ್ಲಿ ಭವಾನಿ ಜಲಾಶಯ ಮತ್ತು ಅಮರಾವತಿ ಜಲಾಶಯಗಳನ್ನು ಕಟ್ಟಿದ್ದಾರೆ. ಅದ್ದರಿಂದ ಮತ್ತೆ 1974ನೇ ಇಸವಿಯಲ್ಲಿ ಈ ಒಂದು | ಅಗ್ರಿಮೆಂಟಿಗೆ ಕೂತರೆ ನಮಗೆ ಬರುವ ನೀರಿನಲ್ಲಿ ಹೆಚ್ಚಿಗೆ ಅವರು ಪುನಃ ಪಾಲು ತೆಗೆದುಕೊಳ್ಳುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಆ ಅಗ್ರಿಮೆಂಟ್ ಪ್ರಕಾರ ನಾವು ನೀರನ್ನು ಉಪಯೋಗ ಮಾಡಬೇಕು. ನಮ್ಮ ನೀರನ್ನು ಉಪಯೋಗ ಮಾಡುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದನ್ನು ಮುಖ್ಯವಾಗಿ ನೋಡಬೇಕಾಗುತ್ತದೆ. ಈ ದೃಷ್ಟಿಯಿಂದ ಆ ನೀರನ್ನು ಉಪಯೋಗ ಮಾಡುವುದಕ್ಕೆ ಯಾವರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಬಸವರಾಜು.—(ಬ)ಗೆ ಉತ್ತರವಾಗಿ 44.827 ಸಹಸ್ರ ದಶಲಕ್ಷ ಘನ ಅಡಿಗಳಷ್ಟು ಧಾರಣಾಶಕ್ತಿಯುಳ್ಳ ಕೃಷ್ಣರಾಜಸಾಗರವನ್ನು ಈಗಾಗಲೇ ನಿರ್ಮಿಸಲಾಗಿದೆ, 45 ಸಹಸ್ರ ದಶಲಕ್ಷ ಘನ ಅಡಿಗಳಷ್ಟು ಹೆಚ್ಚಿನ ನೀರನ್ನು ಶೇಖರಿಸುವ ಬಗ್ಗೆ ಕೆಲವು ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದೀರಿ, ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ನಾನಾ ಅಡಚಣೆಗಳು ಇರುವುದರಿಂದ ಈಗ ಹಾಲಿ ಇರತಕ್ಕ ಪಿಕಪ್‌ಗಳ ಕ್ಯಪಾಸಿಟಿಯನ್ನು ಹೆಚ್ಚು ಮಾಡಿದರೆ ಹೆಚ್ಚು ಪ್ರದೇಶ ನೀರಾವರಿಯಾಗುತ್ತದೆ. ಆದ್ದರಿಂದ ಈ ಬಗ್ಗೆ ತೀವ್ರವಾಗಿ ಕೆಲಸ ಮಾಡಲು ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಬಂದಿರುವ ಪ್ರಶ್ನೆ ಬೇರೆ, ಅಗ್ರಿಮೆಂಟ್ ಪ್ರಕಾರ ನಮ್ಮ ನೀರನ್ನು ಉಪಯೋಗ ಮಾಡುವುದಕ್ಕೆ ಯಾವರೀತಿ ಮಾಡಬೇಕು ಎನ್ನುವುದು ಪ್ರಶ್ನೆ ಆದ್ದರಿಂದ ಆ ನೀರನ್ನು ಉಪಯೋಗ ಮಾಡುವುದಕ್ಕೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಬೇಕಾಗುತ್ತದೆ. ಅದಕ್ಕಾಗಿ ನಾವು ಪ್ರಯತ್ನ ಮಾಡುತ್ತಿದ್ದೇವೆ.

**Sri C. K. RAJAIAH SHETTY.**—After the States Reorganisation still you say in answer to (d) that it is still under examination. May I know how long you will take to examine it ?

ಶ್ರೀ ವೀರೇಂದ್ರ ಪಾಟೀಲ್.—ರಾಜ್ಯಗಳ ಪುನರ್‌ವಿಂಗಡಣೆ ಆದಮೇಲೆ ನಾವು ಮದ್ರಾಸ್ ಸರ್ಕಾರಕ್ಕೆ ಬರೆದಿದ್ದೇವೆ, ಹಿಂದೆ ಆದ ಅಗ್ರಿಮೆಂಟನ್ನು ರಿವೈಜ್ ಮಾಡಬೇಕೆಂದು ನಾವು ಕೇಳಿದ್ದಕ್ಕೆ ಅವರು ಒಪ್ಪಲಿಲ್ಲ. ನೀವು ಏನಾದರೂ ಕೇಳಬೇಕಾದರೆ 1974 ನೇ ಇಸವಿಯಲ್ಲಿ ಕೇಳಬೇಕು. ಅದರ ಒಳಗಡೆ ನಿಮ್ಮ ಜೊತೆಯಲ್ಲಿ ಮಾತುಕತೆಗೆ ನಾವು ತಯಾರಿಲ್ಲ ಎಂದು ಹೇಳಿದರು. ಅದಕ್ಕಾಗಿ ನಾವು ಎರಡನೇ ಪ್ರಯತ್ನ ಏನು ಮಾಡಬೇಕೆಂಬ ಬಗ್ಗೆ ಪರ್ಯಾಲೋಚಿಸಲು ಒಂದು ಕಮಿಟಿಯನ್ನು ನೇಮಕ ಮಾಡಿ ಅವರಿಂದ ವರದಿಯನ್ನು ತರಿಸಿಕೊಂಡು ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

2-00 P.M.

**Sri H. SIDDAVEERAPPA.**—What are the steps you propose to take to safeguard the interest of the Mysore State after 1974 to avoid a contingency, where the Madras Government may raise a question, that since this water is not being utilised they may be permitted to utilise it ?

**Sri VEERENDRA PATIL.**—We have already taken up the projects which were possible of being taken up and the works are in progress and also in order to have a clear understanding and steps that we have to take in order to safeguard the interest of the Mysore State, we had consitituted a committee consisting of all the Engineers. They have made a detailed study and have submitted a report, which is in many volumes. I think it is in 4 or 5 volumes. We have already received those volumes, and they are being examined. But this much I can assure that by 1974 we will be ready to face any contingency.

**Mr. DEPUTY SPEAKER.**—Now, Short Notice Questions. I find that all the Short Notice Questions are similar. All the questions may be taken up together.

Although Sri Bhaskar Shetty is not here at the moment, his Question No. 30 is deemed to have been moved.